ಕೊಡುವುದುರ ಬಗ್ಗೆ ಪ್ರಶ್ನೆಯನ್ನು ಕೇಳದ್ದೇನೆ. ಕರ್ನಾಟಕದಲ್ಲಿ ಇದುವರೆಗೆ 27 199 ಜನರಿಗೆ ಮಾಸಾಶನ ದೊರುಕುತ್ತಿದೆ. ಇದರಲ್ಲಿ ಕೇಂದ್ರದ್ದು, ರಾಜ್ಯದ್ದು ಮತ್ತು ಗೋವಾ ಸ್ವಾತಂತ್ರ್ಯ ಯೋಧರದ್ದು ಎಲ್ಲಾ ಸೇರಿದೆ. ಆದರೆ ಇದುವರೆಗೆ 4796 ಜನರಿಗೆ ಅರ್ಜಿ ಸಲ್ಲಿಸಿದ್ದರೂ ಸಹಿತ ಮಾಸಾಶನ ಮಂಜೂರು ಮಾಡಿರುವುದಿಲ್ಲ. ಸ್ವಾತಂತ್ರ್ಯ ಗಳಿಸಿ ಸುಮಾರು 45ವರ್ಷ ಕಳೆದರೂ ಸಹ ಈವರೆಗೆ ಮಾಸಾಶನ ಇವರಿಗೆ ದೊರತಿಲ್ಲ.ಇದರ ಜೊತೆಗೆ ಮಾಸಾಶನಕ್ಕೆ ಅರ್ಜಿ ಹಾಕಬೇಕೆಂದು ಹೇಳುವುದು ಕೂಡ ಈ ಸ್ವಾತಂತ್ರ್ಯ ಯೋಧರಿಗಿ ಮಾಡುವಂತಹ ಅಗೌರವ ಎಂದು ತಿಳಿದುಕೊಂಡಿದ್ದೇನೆ. ಇದಕ್ಕೆ ಅವರು ಅರ್ಜಿ ಹಾಕಬೇಕಾಗಿಲ್ಲ ಅವರನ್ನು ಗುರುತಿಸಿ ಗೌರವಿಸಿ ಅವರಿಗೆ ಮಾಸಾಶನ ಕೊಡುವುದು ಸರ್ಕಾರದ ಹಾಗು ಸಮಾಜದ ಕರ್ತವ್ಯ. ಆದುದರಿಂದ 4796 ಜನರು ಯಾರು ಅರ್ಜಿ ಹಾಕಿದ್ದಾರೆ ಅವರಿಗೆ ಮಾಸಾಶನ ಬೇಗ ಮಂಜುರು ಮಾಡಲು ಏನು ಕ್ರಮ ಕೈಗೊಳ್ಳುತ್ತೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಅಧ್ಯಕ್ಷರೆ, 4796 ಅರ್ಜಿಗಳ ವಿಲೇವಾರಿ ಆಗದೇ ಇರುವುದಕ್ಕೆ ಮುಖ್ಯಕಾರಣ ಸ್ಥಾನಿಕ ಚೌಕಶಿ, ವರದಿ ಬರದೇ ಇರುವುದು ಒಂದು ಎರಡನೆಯದು ಅರ್ಜಿದಾರರುಗಳಿಂದ ಸಂಪೂರ್ಣ ದಾಖಲೆಗಳು ಬಾರದೇ ಇರುವುದು. ಮೂರನೆಯದಾಗಿ ಜೈಲು ಅಧಿಕಾರಿಗಳಿಂದ ವರದಿ ಬರದೇ ಇರುವುದು . ಈ ಮೂರು ಕಾರಣಗಳಿಂದ ವಿಲೇವಾರಿಯಗದೆ ಉಳಿದಿದೆ. ಈ ಬಗ್ಗೆ ನಾನು ಮುಖ್ಯಕಾರ್ಯದರ್ಶಿಯವರ ಜೊತೆಯಲ್ಲಿ ಮಾತಾಡಿ ಇದನ್ನು ಹೇಗೆ ಸರಳೀಕರಣಗೊಳಿಸಬಹುದು,ಸಡಿಲಿಸಬಹುದು ಎಂಬುದರ ಬಗ್ಗೆ ಪರಿಶೀಲಿಸುತ್ತೇನೆ . ಏಕೆಂದರೆ ಅನೇಕರು ವಯಸ್ಸಾದವರು ಇದ್ದಾರೆ ಅವರು ಕಛೇರಿಯಿಂದ ಕಛೇರಿಗೆ ಅಲೆಯುವಂತಹ ಪರಿಸ್ಥಿತಿಯಲ್ಲಿಲ್ಲ. ಆದ್ದರಿಂದ ನಮ್ಮ ಸ್ಥಳೀಯ ಅಧಿಕಾರಿಗಳನ್ನು ಅವರ ಹತ್ತಿರ ಕಳುಹಿಸಿ ಅವರ ಹತ್ತಿರ ಇರುವ ಮಾಹಿತಿಯನ್ನು ತರಿಸಿ ಆದಷ್ಟು ಜಾಗ್ರತೆ ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.ಯಾರು ನಿಜವಾದ ಸ್ವಾತಂತ್ರ್ಯ ಹೋರಾಟಗಾರರಿದ್ದಾರೆ ಅವರುಗಳ ದಾಖಲೆಗಳನ್ನು ಪರಿಶೀಲನೆ ಮಾಡಿ ಒಂದು ಸಮಯ ನಿಗದಿಗೊಳಿಸಿ ಇಂತಿಷ್ಟು ತಿಂಗಳುಗಳೊಳಗೆ ಇದನ್ನು ವಿಲೇವಾರಿ ಮಾಡಬೇಕೆಂದು ನಾನು ಆದೇಶ ಕೊಡುತ್ತೇನೆ.

ಶ್ರೀ ಎಂ.ವಿ ವೆಂಕಟಪ್ಪ:- ಮಾನ್ಯ ಮುಖ್ಯಮಂತ್ರಿಗಳು ಹೋದ ತಿಂಗಳು ವಿಧುರಾಶ್ವತ್ಥದಲ್ಲಿ ಕೋಲಾರ ಜಿಲ್ಲೆಯ, ಸಮ್ಮೇಳನದಲ್ಲಿ ಭಾಗವಹಿಸಿದಾಗ ಹೇಳಿದ್ದರು.ಅವರಿಗೆ 500 ರೂಪಾಯಿ ಕೊಡುತ್ತಿದ್ದೇವೆ ಅದನ್ನು ಹೆಚ್ಚಿಸುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದರು . ಇಂತಹ ಸ್ವಾತಂತ್ರ್ಯ ಯೋಧರ ಫಲದಿಂದ ನಾವೆಲ್ಲರೂ ಇವೊತ್ತು ಇರುವುದು. ಆಗ ಅವರು ಸ್ವಾತಂತ್ರ್ಯ ಹೋರಾಟ ಮಾಡದೆ ಇದ್ದಿದ್ದರೊ ನಾವು ಈಗ ಇಲ್ಲಿಗೆ ಬರಲು ಆಗುತ್ತಿರಲಿಲ್ಲ . ತಾವು ಅವರಿಗೆ ಕೊನೇ ಪಕ್ಷ 100-150 ರೂಪಾಯಿ ಹೆಚ್ಚು ಮಾಡುತ್ತೇವೆಂದು ಪ್ರಾಮಿಸ್ ಮಾಡಿದ್ದೀರಿ ಈ ಬಗ್ಗೆ ಕ್ರಮ ಕೈಗೊಳ್ಳುತ್ತೀರಾ? I myslef is a political prisoner.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ವೆಂಕಟಪ್ಪನವರು ಹೇಳಿದ್ದು ಸಾಧುವಾಗಿದೆ ನಾನು ವಿಧುರಾಶ್ವತ್ಥದಲ್ಲಿ ನಡೆದ ಸಮಾರಂಭಕ್ಕೆ ಹೋದಾಗ ಈ ಬಗ್ಗೆ ಪುನರ್‌ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದೇನೆ . ಈ ವಿಚಾರ ನಾನು ಆಲೋಚನೆ ಮಾಡುತ್ತೇನೆ.

ರಾಜ್ಯದ ಆಡಳಿತದಲ್ಲಿ ಸಮಗ್ರವಾಗಿ ಕನ್ನಡವನ್ನು ಬಳಸುವುದು.

298 (142) ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಳ):-ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಆಡಳಿತದಲ್ಲಿ ಸಮಗ್ರವಾಗಿ ಕನ್ನಡವನ್ನು ಬಳಸಲಾಗತ್ತಿದೆಯೇ

ಆ)ಕನ್ನಡದಲ್ಲಿ ಆಡಳಿತ ನಡೆಸಲು ಏನಾದರೂ ತೊಂದರೆಗಳಿವೆಯೇ

ಇ) ವಿಧಾನಸೌಧದಿಂದಲೇ ಆಡಳಿತದಲ್ಲಿ ಕನ್ನಡ ಬರುವಂತೆ ಶೀಘ್ರ ಕಾರ್ಯಕ್ರಮ ತೆಗದುಕೊಳ್ಳಲಾಗುವುದೇ

ಈ) ಸಂಪೂರ್ಣವಾಗಿ ಕನ್ನಡದಲ್ಲಿ ಆಡಳಿತ ಯಾವಾಗ ಗುರಿ ಮುಟ್ಟಬಹುದು?

ಶ್ರೀ ಎಂ.ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು) :-

ಅ) ಸಮಗ್ರ ಜಾರಿಗೊಳಿಸಲು ಎಲ್ಲ ಕ್ರಮ ಕೈಗೊಂಡಿದೆ.

ಆ) ಇಲ್ಲ.

ಇ) ತೆಗದುಕೊಳ್ಳಲಾಗುವುದು.

ಈ) ಸ್ವಲ್ಪ ಕಾಲದಲ್ಲಿಯೆ.

ಶ್ರೀ ಬಿ.ಎಂ.ಇದಿನಬ್ಬ :- ಮಾನ್ಯ ಅಧ್ಯಕ್ಷರೆ ರಾಜ್ಯದ ಆಡಳಿತದಲ್ಲಿ ಕನ್ನಡವನ್ನು ಸಂಪೂರ್ಣವಾಗಿ ಬಳಸಲಾಗುತ್ತಿದೆಯೇ ಎಂಬ ನನ್ನ ಪ್ರಶ್ನೆಗೆ ಸಮಗ್ರ ಜಾರಿ ಗೊಳಿಸಲು ಎಲ್ಲಾ ಕ್ರಮ ಕೈಗೊಂಡಿದೆ ಎಂದು ಹೇಳಿದ್ದೀರಿ. ಕನ್ನಡದಲ್ಲಿ ಆಡಳಿತ ನಡೆಸಲು ಏನಾದರೂ ತೊಂದರೆಗಳು ಇವೆಯೇ ಎಂದು ಕೇಳಿದರೆ ಇಲ್ಲ ಎಂದು ಹೇಳಿದ್ದೀರಿ. ನಾನು ತಿಳಿದಹಾಗೆ, ಐ.ಎ.ಎಸ್. ಅಧಿಕಾರಿಗಳು ಕನ್ನಡವನ್ನು ಆಡಳಿತ ಭಾಷೆ ತರಲು ಅಷ್ಟೊಂದು ಉತ್ಸುಕರಾಗಿಲ್ಲ ಅವರ ನಿರುತ್ಸಾಹದಿಂದ ಕನ್ನಡ ಆಡಳಿತ ಭಾಷೆಯಾಗಿ ಇನ್ನೂ ಕರ್ನಾಟಕ ರಾಜ್ಯದಲ್ಲಿ ಬರಲು ಸಾಧ್ಯವಾಗಲಿಲ್ಲ ಎಂದು ನಮಗೆ ಸಂಶಯವುಂಟು. ನೀವು ಸಮಗ್ರವಾಗಿ ಕನ್ನಡವನ್ನು ಜಾರಿಗೊಳಿಸಲು ತೊಂದರೆ ಇಲ್ಲ ಎಂದು ಹೇಳಿದ್ದೀರಿ. ಆದರೆ ನನ್ನ ಸಂಶಯ ಏನು ಎಂದರೆ ದೊಡ್ಡ ದೊಡ್ಡ ಅಧಿಕಾರಿಗಳು ಕನ್ನಡದ ಬಗ್ಗೆ ಜಿಗುಪ್ಸೆ ಹೊಂದಿರುವುದು ಸರ್ಕಾರದ ಗಮನಕ್ಕೆ ಬರಲಿಲ್ಲವೇ? ಅದನ್ನು ನಿವಾರಿಸಲು ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂದು ಕೇಳುತ್ತೇನೆ.

ಶ್ರೀ ವೀರಪ್ಪಮೊಯಿಲಿ :- ಮಾನ್ಯ ಅಧ್ಯಕ್ಷರೆ, ತಮಗೆ ತಿಳಿದ ಪ್ರಕಾರ, ರಾಜ್ಯಪಾಲರ ಭಾಷಣದ ಮೇಲೆ ಉತ್ತರ ಕೊಡುವಾಗ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಏಪ್ರಿಲ್ 1ನೇ ತಾರೀಖಿನಿಂದ ವಿಧಾನಸೌಧದಿಂದ ಹಿಡಿದು ಸರ್ಕಾರದ ಎಲ್ಲಾ ಮಟ್ಟದಲ್ಲೂ ಆದೇಶಗಳು ಕನ್ನಡದಲ್ಲಿಯೇ ಹೋಗುತ್ತವೆ. ಜೂನ್ 1ನೇ ತಾರೀಖಿನಿಂದ ಮಂತ್ರಿಗಳಿಂದ ಕಾರ್ಯದರ್ಶಿಯವರೆಗೆ ಎಲ್ಲಾ ಮಟ್ಟದಲ್ಲೂ ಕಡತದಲ್ಲಿ ಟಿಪ್ಪಣಿ ಕೂಡ ಕನ್ನಡದಲ್ಲಿಯೇ ಕಡ್ಡಾಯವಾಗಿ ಪ್ರಾರಂಭ ಮಾಡುತ್ತೇವೆ ಎಂದು ಹೇಳಿ ಈಗಾಗಲೇ ನಾವು ಕಾರ್ಯಕ್ರಮ ತೆಗದುಕೊಂಡಿದ್ದೇವೆ. ಮತ್ತು ಅದಕ್ಕೆ ಬೇಕಾದಂತಹ ಕಾರ್ಯಕ್ರಮ ನಡೆಯುತ್ತಿದೆ. ಐಎಎಸ್ ಅಧಿಕಾರಿಗಳು ಅವರು ಯಾವುದೇ ಮಟ್ಟದಲ್ಲಾಗಲಿ ಅದರಲ್ಲೂ ಪ್ರಮುಖವಾಗಿ ಕಾರ್ಯದರ್ಶಿಯವರು ಕನ್ನಡದಲ್ಲಿ ಟಿಪ್ಪಣಿ ಬರೆಯಲಿಕ್ಕೆ ನಾವು ಒಂದು ಕೈಪಿಡಿಯನ್ನು ಈಗಾಗಲೇ ಕೊಟ್ಟಿದ್ದೇವೆ. ಅದನ್ನು ದುರಸ್ತಿ ಮಾಡಬೇಕಾದರೆ ಯಾವ ರೀತಿಯಲ್ಲಿ ಟಿಪ್ಪಣಿ ಬರೆಯಬೇಕು ಎಂದು ಹೇಳಿ ಅದನ್ನು ಕೂಡ ಮಾಡುತ್ತೇವೆ. ಈಗಾಗಲೆ ನಮ್ಮ ಮುಖ್ಯ ಕಾರ್ಯದರ್ಶಿಗಳು ಆದೇಶ ಕೊಟ್ಟ ಮೇಲೆ ಯಾವುದನ್ನೂ ಕೂಡ ನನಗೆ ಆಂಗ್ಲಭಾಷೆಯಲ್ಲಿ ಬರೆಯುತ್ತಿಲ್ಲ. ಅವರು ಟಿಪ್ಪಣಿ ಕೂಡ ಕನ್ನಡದಲ್ಲೇ ಬರೆಯುವಂತಹದ್ದು ಬಹಳ ಒಳ್ಳೆಯ ಸೂಚನೆ. ನಮ್ಮ ಮುಖ್ಯಕಾರ್ಯದರ್ಶಿಯವರು ದಸ್ಕತ್ತನ್ನು ಕೂಡ ಕನ್ನಡಲ್ಲೇ ಮಾಡಲಿಕ್ಕೆ

ಪ್ರಾರಂಭ ಮಾಡಿದ್ದಾರೆ. ಆದುದರಿಂದ ಇದು ಸ್ವಲ್ಪ ಯಶಸ್ವಿಯಾಗುತ್ತಾಯಿದೆ. ನಂತರ ಯಾರಾದರೂ ಇದು ಕಷ್ಟವಾಗುತ್ತದೆ ಎಂದರೆ ಅವರನ್ನು ಮೈಸೂರಿನಲ್ಲಿ ಇರತಕ್ಕಂತಹ ನಮ್ಮ ಆಡಳಿತ ತರಬೇತಿ ಕಾಲೇಜಿಗೆ ಮೇ ತಿಂಗಳಿನಲ್ಲಿ ವೆಕೇಷನ್ ಇರತಕ್ಕಂತಹ ಸಂದರ್ಭದಲ್ಲಿ ಅವರನ್ನು ವಿಶೇಷ ತರಬೇತಿಗೆ ಕಳುಹಿಸುತ್ತೇವೆ.

ಶ್ರೀ ಬಿ.ಎಂ.ಇದಿನಬ್ಬ :- ಮಾನ್ಯ ಅಧ್ಯಕ್ಷರೆ, ವಿಧಾನಸೌಧದಿಂದಲೇ ಆಡಳಿತದಲ್ಲಿ ಕನ್ನಡ ಬರುವಂತೆ ಶೀಘ್ರ ಕಾರ್ಯಕ್ರಮ ತೆಗೆದುಕೊಳ್ಳುತ್ತೀರ ಎಂದು ಕೇಳಿದ್ದೇನೆ. ಏಕೆಂದರೆ ವಿಧಾನಸೌಧದಿಂದಲೆ ನಿಜವಾಗಿ ತೊಂದರೆ ಇರುವುದು. ಮುಕುಟಪ್ರಾಯವಾದಂತಹ ವಿಧಾನಸೌಧದಲ್ಲಿ ಕನ್ನಡ ಸರಿಯಾಗಿ ಕಾರ್ಯಕ್ರಮಕ್ಕೆ ಬಂದರೆ ಎಲ್ಲಾ ಕಡೆಯಲ್ಲೂ ಬರುತ್ತದೆ. ಇಲ್ಲೇ ಸರಿಯಾಗಿ ಬರುವದಿಲ್ಲ. ನಮಗೆ ಬರತಕ್ಕಂತಹ ಅರ್ಜಿಗಳು ಅರ್ಧ ಕನ್ನಡ ಒಮ್ಮೊಮ್ಮೆ ಎಲ್ಲಾ ಇಂಗ್ಲೀಷ್‌ನಲ್ಲೇ ಬರುತ್ತವೆ. ಒಂದು ಕಡೆಯಲ್ಲಿ ನಾವು ಆಡಳಿತ ಭಾಷೆ ಕನ್ನಡ ಆಗಬೇಕು ಎಂದು ಹೇಳುತ್ತಿರುವಾಗ ಅವರು ಬೇಕಿದ್ದರ ಮತ್ತೊಂದು ಪುಟದಲ್ಲಿ ಇಂಗ್ಲೀಷನಲ್ಲಿ ಕೊಡಲಿ. ಆದರೆ ಕನ್ನಡದಲ್ಲೇ ಕಟ್ಟುನಿಟ್ಟಾಗಿ ಕಡ್ಡಾಯವಾಗಿ ಬರುವಂತೆ ಮಾಡುವಂಥಾದ್ದು ಬಹಳ ಸೂಕ್ತ ಎಂದು ನನಗೆ ಕಾಣುತ್ತದೆ. ಅದೂ ಅಲ್ಲದೆ ಸಂಪೂರ್ಣವಾಗಿ ಕನ್ನಡದಲ್ಲಿ ಆಡಳಿತ ಯಾವಾಗ ಗುರಿ ಮುಟ್ಟಬಹುದು ಎಂದು ಕೇಳಿದರೆ ಇನ್ನೂ ಸ್ವಲ್ಪ ಕಾಲದಲ್ಲೇ ಎಂದಿದ್ದಾರೆ. ನಾಲ್ಕು ಐದು ವರ್ಷಗಳಿಂದ ಸ್ವಲ್ಪ ಕಾಲದಲ್ಲೇ ಎಂದು ಅನೇಕ ಪ್ರಶ್ನೆಗಳಿಗೆ ಉತ್ತರ ಹೇಳುತ್ತಾ ಬಂದಿದ್ದಾರೆ. ಈ ಸ್ವಲ್ಪ ಕಾಲದಲ್ಲೇ ಎಂದರೆ ಯಾವಾಗ ಆಗುತ್ತದೆ ಎಂಬುದನ್ನು ನಾನು ಕೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಶ್ರೀ ಎಂ.ವೀರಪ್ಪಮೊಯಿಲಿ :- ಮಾನ್ಯ ಅಧ್ಯಕ್ಷರೆ, ಇನ್ನೂ ಸ್ವಲ್ಪ ಕಾಲ ಎನ್ನುವ ಪ್ರಶ್ನೆಯೇ ಇಲ್ಲ. ನಾನು ಹೇಳಿದ ಪ್ರಕಾರ ಏಪ್ರಿಲ್ 1ನೇ ತಾರೀಖಿನಿಂದ ಎಲ್ಲಾ ಆದೇಶಗಳು ಕೂಡ ಕನ್ನಡದಲ್ಲಿಯೇ ಬರುತ್ತದೆ. ಜೂನ್ 1ನೇ ತಾರೀಖಿನಿಂದ ಐಎಎಸ್ ಅಧಿಕಾರಿಗಳು ಆಗಲಿ ಅಥವಾ ಯಾವುದೇ ಅಧಿಕಾರಿಗಳಾಗಲಿ ಎಲ್ಲಾ ಮಟ್ಟದಲ್ಲೂ ಕಡತದ ಟಿಪ್ಪಣಿಗಳನ್ನೂ ಕೂಡ ಕನ್ನಡದಲ್ಲೇ ಮಾಡಬೇಕು ಎಂದು ಹೇಳಿದ್ದೇವೆ. ಆದುದರಿಂದ ಸ್ವಲ್ಪಕಾಲ ಎಂದು ಹೇಳಿದ ನನ್ನ ಉತ್ತರಕ್ಕೆ ಇದು ತಿದ್ದುಪಡಿ. ಏಕೆಂದರೆ ಈಗಾಗಲೇ ನಾವು ಇದನ್ನು ನಿರ್ಣಯ ಮಾಡಿದ್ದೇವೆ. ಜಿಲ್ಲಾಮಟ್ಟದಲ್ಲಿ ಈಗಾಗಲೇ ನೂರಕ್ಕೆ 90 ಪಾಲು ಕನ್ನಡ ಆಡಳಿತ ಭಾಷೆ ಆಗಿದೆ. ಇನ್ನು ನೂರಕ್ಕೆ ನೂರು ಪಾಲನ್ನು ಕೂಡ ಈ ವರ್ಷದಲ್ಲಿ ಮಾಡುತ್ತೇವೆ. ಆದುದರಿಂದ ಈಗ ಬರತಕ್ಕಂತಹ ವರ್ಷ ಏನಿದೆ ಅದು ಕನ್ನಡ ಜಾಗೃತ ವರ್ಷವಾಗುತ್ತದೆ ಮತ್ತು ಕನ್ನಡದ ಅನುಷ್ಠಾನದಲ್ಲಿ ಒಂದು ಹೊಸ ಯುಗ ಹೊಸ ಒಂದು ಮನ್ವಂತರ ಪ್ರಾರಂಭ ಮಾಡಲಿಕ್ಕೆ ಏನು ಬೇಕೋ ಅದನ್ನೆಲ್ಲಾ ಮಾಡುತ್ತೇವೆ.

ಶ್ರೀ ವಾಟಾಳ್‌ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರ ಉತ್ತರ ನೋಡಿದರೆ ನಮ್ಮ ಕಣ್ಣಿಗೆ ವಸಂತ ಮಾಸ ಬಿದ್ದಹಾಗೆ ಆಗುತ್ತದೆ. ಅಂದರೆ ಜೇನುತುಪ್ಪವನ್ನು ಸವಿದ ಹಾಗೆ ಆಗುತ್ತದೆ. ಇದೆಲ್ಲಾ ಕನಸಿನಲ್ಲಿ ಕಂಡಹಾಗೆ ಆಗುತ್ತದೆ. ತಾವು ನಿಜವಾಗಲೂ ಏಪ್ರಿಲ್ ಒಂದರಿಂದ ಎಂದು ಹೇಳಿದಾಗ ನನಗೆ ಸ್ವಲ್ಪ ಅನುಮಾನವಾಗುತ್ತದೆ. ಏಕೆಂದರೆ ಅಂದು ಮೂರ್ಖರ ದಿನ. ಏಪ್ರಿಲ್ ಒಂದನ್ನು ಸಾಮಾನ್ಯವಾಗಿ ಇಡೀ ಪ್ರಪಂಚದಲ್ಲಿ ಮೂರ್ಖರ ದಿನವನ್ನಾಗಿ ಆಚರಣೆ ಮಾಡುತ್ತಾರೆ. ಅದಕ್ಕೋಸ್ಕರ ನೀವೇನಾದರೂ ಕನ್ನಡಿಗರನ್ನು ಮೂರ್ಖರನ್ನಾಗಿ ಮಾಡತಕ್ಕಂತಹ ವ್ಯವಸ್ಥೆಗೆ ಹೊರಟಿದ್ದೀರ?

ಶ್ರೀ ಎಂ.ವೀರಪ್ಪಮೊಯಿಲಿ :- ಏಪ್ರಿಲ್ ಒಂದು ಕನ್ನಡಿಗರ ಮೂರ್ಖರ ದಿನವಲ್ಲ. ಅದು ಆಂಗ್ಲರ ಮೂರ್ಖರ ದಿನ. ಆಂಗ್ಲರ ಮೂರ್ಖರ ದಿನವನ್ನು ತಾವು ಆಚರಣೆ ಮಾಡುವುದಕ್ಕೆ ಹೋದರೆ ಕನ್ನಡಕ್ಕೆ ಇದಕ್ಕಿಂತ ದೊಡ್ಡ ಅಪಮಾನ ಇಲ್ಲ.

ಶ್ರೀ ವಾಟಾಳ್‌ನಾಗರಾಜ್ :- ಮಾನ್ಯ ಅಧ್ಯಕ್ಷರೆ ನಾನು ಆಚರಣೆ ಮಾಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಿರುವುದು ಏಪ್ರಿಲ್ ಒಂದನೇ ತಾರೀಖಿನಿಂದ ಎಂದು. ನಾನಾಗಿದ್ದರೆ ಯುಗಾದಿ ಹಬ್ಬದ ದಿನ ಎಂದು ಹೇಳುತ್ತಿದ್ದೆ. ನೀವು ಏಪ್ರಿಲ್ ಒಂದು ಎಂದಾಗ ನನಗೆ ಸ್ವಲ್ಪ ಅನುಮಾನವಾಯಿತು. ಹಾಗೂ ನಿಮ್ಮಲ್ಲಿ ನಾನು ಕೇಳುವುದೇನೆಂದರೆ ತಮ್ಮ ಕನ್ನಡದ ಕಾಳಜಿ ಬಗ್ಗೆ ಪ್ರಾಮಾಣಕತೆಯಬಗ್ಗೆ ನಮಗೆ ಬಹಳ ಅಪಾರವಾದಂತಹ ಗೌರವ ಇದೆ. ಅದರಲ್ಲಿ ಎರಡು ಅಭಿಪ್ರಾಯವಿಲ್ಲ. ನಿಮ್ಮಲ್ಲಿ ಕನ್ನಡ ಬಾರದೇ ಇರುವಂತಹ ಮಂತ್ರಿಗಳು ಮತ್ತು ಕನ್ನಡ ಬಾರದ ಇರುವಂಹ ಶಾಸಕರು ಯಾರು ಇದ್ದಾರೆ. ಇದರ ಮಾಹಿತಿ ನಮಗೆ ಸ್ವಲ್ಪ ಬೇಕಾಗಿದೆ. ಏಕೆಂದರೆ ನಮ್ಮ ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರಾದಂತಹ ಶ್ರೀಮಾನ್ ವಿಶ್ವನಾಥರವರು ಅನೇಕ ಸಮ್ಮೇಳನಗಳಲ್ಲಿ ಕನ್ನಡ ಬಾರದೇ ಇರುವ ಸಚಿವರು ಮತ್ತು ಶಾಸಕರು ಇದ್ದಾರೆ. ಇವರ ಅಡ್ಡಿಯಿಂದ ನಮಗೆ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಲಿಕ್ಕೆ ಆಗುತ್ತಿಲ್ಲ ಎಂದು ಹೇಳಿದ್ದಾರೆ. ಅದು ನಿಜವೇ ಇದ್ದರೆ ಅಂತಹವರು ಯಾರಿದ್ದಾರೆ ಎನ್ನುವುದನ್ನು ನಮಗೆ ತಿಳಿಸಬೇಕು.

ಶ್ರೀ ಎಂ.ವೀರಪ್ಪಮೊಯಿಲಿ :- ಮಾನ್ಯ ಅಧ್ಯಕ್ಷರೆ ಕನ್ನಡ ಬಾರದ ಶಾಸಕರು ಯಾರಾದರೂ ಇದ್ದರೆ ಅವರನ್ನು ಕನ್ನಡದ ಕಾವೇರಿಯಲ್ಲಿ ಮೂರು ಸಾರಿ ಮುಳುಗಿಸಿ ಏಳಿಸಿ ಅವರಿಗೆ ಕನ್ನಡ ಬರುವ ಹಾಗೆ ಮಾಡುತ್ತೇವೆ. ತಮಗೆಲ್ಲಾ ಗೊತ್ತಿದೆ. ಶ್ರೀ ಭೀಮಣ್ಣಖಂಡ್ರೆಯವರು ಕನ್ನಡ ಕಲಿತಿಲ್ಲ. ಆದರೂ ಅವರಿಗೆ ಕನ್ನಡದ ಬಗ್ಗೆ ಇರುವ ಅನುಕಂಪ ಅತೀವ ಆಸಕ್ತಿ ಮತ್ತು ಹೋರಾಟದ ಮನಸ್ಸು ಬಹಳ ಜನರಿಗೆ ಇಲ್ಲ.

ಶ್ರೀ ವಾಟಾಳ್‌ನಾಗರಾಜ್ :- ಅವರ ಬಗ್ಗೆ ಟೀಕೆ ಮಾಡುವುದಿಲ್ಲ. ಅವರಿಗೆ ಕನ್ನಡದ ಬಗ್ಗೆ ಕಾಳಜಿ ಇದೆಯೆಂದು ನಾವು ತಿಳಿದುಕೊಂಡಿದ್ದೇವೆ.

ಶ್ರೀ ಕೆ.ಎಚ್.ರಂಗನಾಥ :- ಶ್ರೀ ಭೀಮಣ್ಣಖಂಡ್ರೆಯವರು ಈ ಸದನಕ್ಕೆ ಮೊದಲು ಬಂದಾಗ ಅವರು ಭಾಷಣ ಮಾಡಿದ್ದು ಉರ್ದುಭಾಷೆಯಲ್ಲಿ, ಕನ್ನಡದಲ್ಲಿ ಅಲ್ಲ. ಈಗ ಅವರು ಬದಲಾವಣೆ ಆಗಿರುವುದು ನೋಡಿದರೆ ಆಶ್ಚರ್ಯವಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಶ್ರೀ ಭೀಮಣ್ಣಖಂಡ್ರೆಯವರು ಕನ್ನಡದಲ್ಲಿ ಮಾತನಾಡಿದರೆ ಅದನ್ನು ಟ್ರಾನ್ಸ್‌ಲೇಟ್ ಮಾಡುವುದಕ್ಕೆ ಯಾರನ್ನಾದರೂ ಒಬ್ಬರನ್ನು ಇಡಬೇಕು.

ಭಟ್ಕಳದಲ್ಲಿ ಮಂಜೂರಾದ ಕ್ರೀಡಾಂಗಣದ ಕೆಲಸ.

300 (1345) ಶ್ರೀ ಆರ್.ಎನ್.ನಾಯ್ಕ(ಭಟ್ಕಳ) :- ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) 1992-93ನೇ ವರ್ಷದಲ್ಲಿ ರಾಜ್ಯದಲ್ಲಿ ಯಾವ ತಾಲೂಕುಗಳಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಹಣ ಬಿಡಿಗಡೆ ಮಾಡಲಾಗಿದೆ ;

ಆ) ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ ಮಂಜೂರಾದ ಕ್ರೀಡಾಂಗಣದ ಕೆಲಸವನ್ನು ಪ್ರಾರಂಭ ಮಾಡಲಾಗಿದೆಯೆ ;